# ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

MUNJAVU' Kannada Weekly, KOPPA - CHM. ಫೋನ್ : 114

8ನೇ ವರ್ಷ 8ನೇ ಸಂಚಿಕೆ ಕೊಪ್ಪ 8-10-1989 ಭಾನುವಾರ ಬೆಲೆ 60 ಪೈಸೆ


## ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆ

ಶೃಂಗೇರಿ ಜೂನಿಯರ್ ಛೇಂಬರ್ ಆಶ್ರಯದಲ್ಲಿ ನವೆಂಬರ್ ತಿಂಗಳ ಕೊನೆಯಲ್ಲಿ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯನ್ನು ನಡೆಸಲಾಗುವುದು. ಆಸಕ್ತರು ಪ್ರವೇಶ ಪತ್ರ ಮತ್ತು ವಿವರಗಳಿಗಾಗಿ ಛೇಂಬರ್‌ನ ಅಧ್ಯಕ್ಷರೊಡನೆ ಅಕ್ಟೋಬರ್ 15 ರೊಳಗೆ ವ್ಯವಹರಿಸಬೇಕೆಂದು ಕೋರಲಾಗಿದೆ.

## ಜನತಾ ದಳ ಸಂಘಟನಾ ಸಭೆಗಳು

ಕೊಪ್ಪ : ಜನತಾ ದಳ ಮತ್ತು ಯುವ ಜನತಾ ದಳ ಸಂಘಟನೆಗಾಗಿ ಅ. 17ರಿಂದ 22ರವರೆಗೆ ತಾಲ್ಲೂಕಿನಾದ್ಯಂತ ಸಭೆಗಳು ನಡೆಯಲಿವೆ. ಗೋವಿಂದ ಗೌಡರು, ಆನಂದ ರಾಮ ಭಟ್, ಮಂಜುನಾಥಶೆಟ್ಟಿ, ಯುವ ಜನತಾ ಅಧ್ಯಕ್ಷ ವಿ. ಡಿ. ನಾಗರಾಜ್ ಮುಂತಾದ ಮುಖಂಡರು ಈ ಸಭೆಗಳಲ್ಲಿ ಭಾಗವಹಿಸುತ್ತಾರೆ.

## ಗಣಿ ಕುಸಿದು ಇಬ್ಬರ ಸಜೀವ ಸಮಾಧಿ!

**ಕೊಪ್ಪ : ಇಲ್ಲಿನ ಪಿ. ಎನ್. ಪ್ರಕಾಶ್ ನಡೆಸುತ್ತಿರುವ ಬೆಣವಳ್ಳಿ ಪುರದ ಬಳಿಯ ಬುಕ್ಕಿ ಗುಡ್ಡದ ಮ್ಯಾಂಗನೀಸ್ ಗಣಿಯಲ್ಲಿ ಭೂ ಕುಸಿತದಿಂದ ಇಬ್ಬರು ಕಾರ್ಮಿಕರು ಸಜೀವ ಸಮಾಧಿಯಾದ ದುರ್ಘಟನೆ ಗಾಂಧಿ ಜಯಂತಿಯಂದು ಸಂಭವಿಸಿತು.**

ಸಮೀಪದ ಕಗ್ಗದವನಾದ ಗಾರೆ ಕೆಲಸಗಾರ ಸದಾಶಿವ (28) ಮತ್ತು ಮೆಣಸೂರಿನ ರತ್ನ (21) ಇವರೇ ಈ ನತದೃಷ್ಟರು. ರತ್ನ ಸುಮಾರು ಒಂದೂವರೆ ವರ್ಷದಿಂದ ಈ ಕೆಲಸ ಮಾಡುತ್ತಿದ್ದರೆ, ಪುಟ್ಟ 2 ಮಕ್ಕಳ ತಂದೆಯಾದ (ಅದರಲ್ಲೊಂದು 2 ತಿಂಗಳ ಹಸುಗೂಸು) ಸದಾಶಿವ ಮಳೆಗಾಲದಲ್ಲಿ ಗಾರೆ ಕೆಲಸ ಸಿಗದ್ದರಿಂದ ಕಳೆದ ಕೆಲವು ವಾರಗಳಿಂದಷ್ಟೇ ಈ ಕೆಲಸಕ್ಕೆ ಬರುತ್ತಿದ್ದನೆನ್ನಲಾಗಿದೆ.

20-30 ಅಡಿಯಷ್ಟು ಉದ್ದಗಲಕ್ಕೆ ಬಾವಿಯಂತೆ ಮಣ್ಣು ಅಗೆಯುತ್ತ, ಅದಿರಿನ ಪದರ ಸಿಕ್ಕಿದೊಡನೆ ಆ ದರೆಯೊಳಗೆ ಅಡ್ಡಲಾಗಿ 'ದೊಗೆಯುವುದು' ಇಲ್ಲಿನ ರೂಢಿ ಎಂದು ಕಂಡು ಬಂದಿದೆ. ಪದರ ಸಿಕ್ಕಿದ ನಂತರ ಪುನಃ ಮೇಲಿನಿಂದಲೇ ಮಣ್ಣು ಅಗೆದು ಹಾಕಿ, ಅದಿರು ತೆಗೆಯಬೇಕಾದುದು ಸರಿಯಾದ ಕ್ರಮ ಎನ್ನಲಾಗಿದೆ.

ಈ ದುರಂತದ ದಿನವಂದು, ಗುಡ್ಡದ ಮೇಲಿರುವ ಗಣಿಯವರೆಗೆ ಟ್ರ್ಯಾಕ್ಟರ್‌ಗಾಗಿ ದಾರಿ ಬಿಡಿಸಲು ಕೆಲಸಗಾರರಿಗೆ ಹೇಳಿದ್ದರೂ ಅವರು ಅದಿರು ಅಗೆಯಲು ಹೋದರೆಂದು ಪ್ರಕಾಶ್ ಹೇಳುತ್ತಾರೆ. ಆದರೆ, ಈ ರೀತಿ ಅಡ್ಡಲಾಗಿ ಅಗೆಯುವ ಕ್ರಮವೇ ಇಂಥ ಅನಾಹುತಕ್ಕೆ ಕಾರಣವಾದುದು ಸ್ವಯಂವೇದ್ಯ.

ಹೀಗೆ ಅಗೆಯಬಾರದೆಂದು ತಾವು ಹೇಳಿದರೂ ಕೆಲಸಗಾರರೇ ಆ ರೀತಿ ಮಾಡುತ್ತಿದ್ದರೆಂದು ಪ್ರಕಾಶ್ ಹೇಳುತ್ತಾರೆ. ಆದರೆ, ತಾವು ಹಾಗೆ ಅಗೆಯಲು ಭಯ ಪಟ್ಟು ನಿರಾಕರಿಸಿದರೂ ಮಾಲೀಕರೇ ಒತ್ತಾಯಿಸಿ 'ಏನೂ ಆಗುವುದಿಲ್ಲ'ವೆಂದು 'ಧೈರ್ಯ' ಹೇಳುತ್ತಿದ್ದರೆಂದೂ, ಕಳೆದ ವರ್ಷ ನೆರೆಯ ಚೌತದ ಗುಡ್ಡದಲ್ಲಿ ಇದೇ ರೀತಿ ಅಗೆದು ಮೇಲೆ ಬರುವಷ್ಟರಲ್ಲಿ ಸುಮಾರು 10 ಲೋಡಿನಷ್ಟು ಮಣ್ಣು ಕುಸಿದು ಬಿದ್ದಿತ್ತೆಂದೂ, ಆ ನಂತರವೂ ಅವರು ಈ ಕ್ರಮ ಕೈ ಬಿಡಲಿಲ್ಲವೆಂದೂ ಕೆಲಸಗಾರರು ಸ್ಪಷ್ಟಪಡಿಸುತ್ತಾರೆ.

ಗಣಿ ಮಾಲೀಕರು ಸದಾಶಿವನ ಆಶ್ರಿತರಿಗೆ 10 ಸಾವಿರ ಮತ್ತು ರತ್ನನ ತಂದೆ-ತಾಯಿಗಳಿಗೆ 7 ಸಾವಿರ ರೂ. ಪರಿಹಾರ ಕೊಟ್ಟು, ಸರ್ಕಾರದಿಂದ ದೊರೆಯಬಲ್ಲ ಪರಿಹಾರಗಳನ್ನೂ ಕೊಡಿಸಿ, ಪ್ರಕರಣ ಮುಕ್ತಾಯ ಮಾಡಲು ಒಡಂಬಡಿಕೆ ಮಾಡಿಕೊಂಡಿದ್ದಾರೆನ್ನಲಾಗಿದೆ. ಆದರೆ ಇದು ತೀರಾ ನಗಣ್ಯವಾದ ಪರಿಹಾರವಾದ್ದರಿಂದ, ಈ ಬಗ್ಗೆ ಸೂಕ್ತ ತನಿಖೆ ನಡೆಸಿ, ನತದೃಷ್ಟ ಕುಟುಂಬಗಳಿಗೆ ಯೋಗ್ಯ ಪರಿಹಾರ ಕೊಡಿಸಬೇಕೆಂದು ಕೊಪ್ಪ ತಾ|| ಸಿಪಿಐ ಕಾರ್ಯದರ್ಶಿ ಎ. ಆರ್. ರಾಮಚಂದ್ರ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

## ವಿದ್ಯುತ್ ತಂತಿ ತಗುಲಿ ಮೃತ ಪಟ್ಟ ಕಾರ್ಮಿಕನ ಆಶ್ರಿತರಿಗೆ 50 ಸಾವಿರ ರೂ. ಪರಿಹಾರಕ್ಕೆ ಸಿಪಿಐ ಆಗ್ರಹ

ಬಸರೀಕಟ್ಟೆ : ಇಲ್ಲಿಗೆ ಸಮೀಪದ ಕವನಹಳ್ಳ-ಬಳಿಯ ಕಾಲು ಹಾದಿಯಲ್ಲಿ ಬಿದ್ದಿದ್ದ ವಿದ್ಯುತ್ ವಾಹಕ ತಂತಿ ತಗುಲಿ ಸೆ. 30ರ ರಾತ್ರಿ 8 ಗಂಟೆಯಲ್ಲಿ ಮೇರ್ತಿ ವಡ್ಡಗಲ್ಲಿನ ಕಾರ್ಮಿಕ ಗೋಣಿ ಬಸಪ್ಪ ಎಂಬ 25ರ ಯುವಕ ಸ್ಥಳದಲ್ಲೇ ದುರ್ಮರಣಕ್ಕೀಡಾದರು.

ಅ. 1 ರಂದು ಕ. ವಿ. ಮಂ. ಅಧಿಕಾರಿಗಳು, ಬಾಳೆಹೊನ್ನೂರು ಠಾಣಾಧಿಕಾರಿಗಳು ಮತ್ತು ಸ್ಥಳೀಯ ವೈದ್ಯರು ಸ್ಥಳ ಪರಿಶೀಲನೆ, ಶವ ಪರೀಕ್ಷೆ, ಮತ್ತು ಮಹಜರು ನಡೆಸಿದರು.

ಈ ದುರ್ಮರಣಕ್ಕೆ ಕ. ವಿ. ಮಂ. ಆಡಳಿತವನ್ನು ಹೊಣೆ ಮಾಡಿರುವ ಕೊಪ್ಪ ತಾ|| ಭಾರತ ಕಮ್ಯುನಿಸ್ಟ್ ಪಕ್ಷವು, ಗೋಣಿಬಸಪ್ಪ ತನ್ನ ತಂದೆ-ತಾಯಿಗಳ ಏಕ ಮಾತ್ರ ಮಗನಾಗಿ ಅವರಿಗೆ ಆಧಾರವಾಗಿದ್ದವನು ; ಅವನ ಆಶ್ರಿತರಿಗೆ ಕನಿಷ್ಠ 50 ಸಾವಿರ ರೂ. ಗಳ ಪರಿಹಾರ ನೀಡಬೇಕು ಎಂದು ಮಂಡಳಿಯನ್ನು ಒತ್ತಾಯಿಸಿದೆ.

## ಸಾರಾಯಿ ವಿತರಕರ ವೇತನ ಹೆಚ್ಚಿಸಲು ಆಗ್ರಹ

ಕೊಪ್ಪ: ಕೊಪ್ಪ, ನ. ರಾ. ಪುರ ಮತ್ತು ಶೃಂಗೇರಿ ತಾ||ಗಳ ಸಾರಾಯಿ ಮಾರಾಟಗಾರರಿಗೆ ತಿಂಗಳಿಗೆ ಕನಿಷ್ಠ 1000 ರೂ. ವೇತನ ಅಥವಾ (ಕಮಿಶನ್‌ನವರಿಗೆ) ಲೀಟರಿಗೆ ಕನಿಷ್ಠ 5 ರೂ. ಕಮಿಶನ್ ಮತ್ತು ಪ್ರತಿಯೊಬ್ಬರಿಗೂ ತಿಂಗಳಿಗೆ ಮನೆ ಬಾಡಿಗೆ ಭತ್ಯ 100 ರೂ. ಹಾಗೂ ನಿರ್ವಹಣೆಭತ್ಯ 50 ರೂ. ನೀಡಬೇಕೆಂದು ಎ. ಐ. ಟಿ. ಯು. ಸಿ. ನೇತೃತ್ವದ ಸಾರಾಯಿ ಮಾರಾಟಗಾರರ ಸಂಘ ಗುತ್ತಿಗೆದಾರರಿಗೆ ಬೇಡಿಕೆ ಸಲ್ಲಿಸಿದೆ.

**ಬಾಟಲಿ ಸಾರಾಯಿಗೆ ಆಗ್ರಹ**

ಸಾರಾಯಿ ಗುತ್ತಿಗೆ ಪಡೆಯುವಾಗ ಬಾಟಲಿಗಳಲ್ಲಿ ಮಾರುವುದಾಗಿ ಸರ್ಕಾರಕ್ಕೆ ತಿಳಿಸಿದ್ದರೂ ಇದೀಗ ಪ್ಯಾಕೆಟ್‌ಗಳಲ್ಲಿ ಮಾರುತ್ತಿದ್ದು ಇದನ್ನು ಕುಡಿದರೆ ಕಣ್ಣುರಿ, ಸಂಕಟ ಮುಂತಾದ ತೊಂದರೆಗಳು ಕಾಣಿಸಿಕೊಂಡಿವೆಯೆಂದು ಸಾರ್ವಜನಿಕ ದೂರುಗಳು ಬರುತ್ತಿದ್ದು, ಇದು ಕುಡಿದವರ ಆರೋಗ್ಯಕ್ಕೆ ಅಪಾಯಕಾರಿಯೆಂದು ತಜ್ಞರು ಸಹ ಅಭಿಪ್ರಾಯ ಪಟ್ಟಿರುವುದರಿಂದ, ಕೂಡಲೇ ಪ್ಯಾಕೆಟ್ ಬದಲು ಬಾಟಲಿಗಳಲ್ಲೇ ಮಾರಬೇಕೆಂದೂ, ಈ ರೀತಿ ಕ್ರಮ ಕೈಗೊಳ್ಳದಿದ್ದರೆ ತೀವ್ರ ಹೋರಾಟ ನಡೆಸುವುದಾಗಿಯೂ ಕೊಪ್ಪ ತಾ|| ಸಿಪಿಐ ಕಾರ್ಯದರ್ಶಿ ಎ. ಆರ್. ರಾಮಚಂದ್ರ ಸಾರಾಯಿ ಗುತ್ತಿಗೆದಾರರಿಗೆ ಪತ್ರ ಬರೆದಿದ್ದಾರೆ.

## ಹಿಂದುಳಿದ ಜಾತಿಗಳ, ಅಲ್ಪಸಂಖ್ಯಾತರ ಮತ್ತು ದಲಿತರ ಏಕತೆ ಕುರಿತು ವಿಚಾರ ಸಂಕಿರಣ

ಕೊಪ್ಪ : ಹಿಂದುಳಿದ ಜಾತಿಗಳ, ದಲಿತರ ಮತ್ತು ಅಲ್ಪ ಸಂಖ್ಯಾತರ ಏಕತೆ ಕುರಿತ ವಿಚಾರ ಸಂಕಿರಣ ಅ. 15ರಂದು ಭಾನುವಾರ ಕೊಪ್ಪದಲ್ಲೂ (ಜಲಜಾಕ್ಷಮ್ಮ ಕಲ್ಯಾಣ ಮಂಟಪ), ಅ 16ರ ಸೋಮವಾರ ಶೃಂಗೇರಿಯಲ್ಲೂ ನಡೆಯುತ್ತದೆ. ದಲಿತ ಸಂಘರ್ಷ ಸಮಿತಿಯ ಹಿರಿಯ ನಾಯಕ ಪ್ರೊ|| ಬಿ. ಕೃಷ್ಣಪ್ಪ ಈ ಏಕತೆ ಕುರಿತ ಪ್ರಧಾನ ಭಾಷಣ ಮಾಡುವರು.

ಹಿಂದುಳಿದ ವರ್ಗಗಳ ಆಯೋಗಗಳ ವರದಿಗಳನ್ನು ಕುರಿತು ಎಚ್. ಸೋಮಶೇಖರ್, ಹಿಂದುಳಿದ ವರ್ಗಗಳ ಮಹಿಳೆಯರ ಸ್ಥಿತಿ-ಗತಿ ಕುರಿತು ಶ್ರೀಮತಿ ಶಶಿಕಲಾ ಉರಣ್ಕರ್, ಅಲ್ಪಸಂಖ್ಯಾತರ ಸ್ಥಿತಿಗತಿಗಳನ್ನು ಕುರಿತು ಶ್ರೀಮತಿ ಬಾನು ಮುಷ್ತಾಕ್ ಮತ್ತು ನಾ ಡಿಸೋಜ ವಿಚಾರ ಮಂಡಿಸುವರು (ಶೃಂಗೇರಿಯಲ್ಲಿ ನಾ ಡಿಸೋಜ ಪಾಲ್ಗೊಳ್ಳುವುದಿಲ್ಲ).

ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ ಮತ್ತು ಹಿಂದುಳಿದ ಜಾತಿಗಳ ಹಲವು ನಾಯಕರು ಈ ಸಮ್ಮೇಳನಗಳಲ್ಲಿ ಪಾಲ್ಗೊಳ್ಳುತ್ತಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

# ಭಾರತದ 3ನೇ ಅತಿ ಪ್ರಾಚೀನ ಭಾಷೆಯಾದರೂ ಆಧುನಿಕ ಕಾಲದಲ್ಲಿ ಹಿಂದುಳಿಯುತ್ತಿರುವ ಕನ್ನಡ

ಭಾರತದ 2000 ಭಾಷೆಗಳ ಪೈಕಿ ಪ್ರಾಚೀನತೆಯಲ್ಲಿ 3 ನೇ ಸ್ಥಾನದಲ್ಲಿರುವ ಕನ್ನಡ ಆಧುನಿಕ ಕಾಲದಲ್ಲಿ ಹಿಂದುಳಿಯುತ್ತಿರುವ ಬಗ್ಗೆ ಆತಂಕ, ಕಳಕಳಿ ಸೆ. 28 ರಂದು ನಡೆದ ಕೊಪ್ಪ ತಾ|| ವಸಂತ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ವ್ಯಕ್ತವಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಕೊಪ್ಪ ತಾ|| ಸಮಿತಿ ಈ ಕಾರ್ಯಕ್ರಮ ಏರ್ಪಡಿಸಿತ್ತು.

ತಾಲ್ಲೂಕು ಸಮಿತಿಯನ್ನು ಉದ್ಘಾಟಿಸಿದ ಕಿರಿಯ ಕಾಲೇಜು ಪ್ರಿನ್ಸಿಪಾಲ್ ಎ. ಮೋಹನದಾಸ್ ಭಟ್, 4 ಬಾರಿ ಜ್ಞಾನಪೀಠ ಪ್ರಶಸ್ತಿಗಳಿಸಿದಂಥ ಸಾಹಿತ್ಯ ದಿಗ್ಗಜಗಳು ಕನ್ನಡದಲ್ಲಿದ್ದರೂ ಜಿಲ್ಲೆ, ತಾ|| ಮಟ್ಟಗಳಲ್ಲಿ ಕನ್ನಡ ಸಾಹಿತ್ಯ ಚಟುವಟಿಕೆ ಬಗ್ಗೆ ಆಗಬೇಕಾದ ಕೆಲಸ ಬಹಳ ಇದೆಯೆಂದು ಹೇಳಿ, ಸಾರಸ್ವತ ಲೋಕದಲ್ಲಿ ಜನಸಾಮಾನ್ಯರಿಗೂ ಸ್ವಾರಸ್ಯ ಇದೆ, ಅದರಲ್ಲಿ ಪಾಲ್ಗೊಳ್ಳಲು ಅವಕಾಶ ಇದೆ ಎಂಬ ಅರಿವು ಮೂಡಿಸಲು ಇಂಥ ಕಾರ್ಯಕ್ರಮಗಳು ಉಪಯುಕ್ತ ಎಂದರು.

ವಸಂತ ಸಾಹಿತ್ಯೋತ್ಸವದ ಅಂಗವಾಗಿ, ಕನ್ನಡ ನಾಡು, ನುಡಿ, ಪರಂಪರೆ ಕುರಿತು ಸಂಕ್ಷಿಪ್ತ ಉಪನ್ಯಾಸ ನೀಡಿದ ನರಸಿಂಹರಾಜಪುರ ಪ್ರ. ದ. ಕಾಲೇಜು ಪ್ರಿನ್ಸಿಪಾಲ್ ಎಂ. ಕೆ. ಹಾಲೇಶ್‌ರವರು, 'ಕಾವೇರಿಯಿಂದ ಗೋದಾವರಿವರೆಗೆ' ಕನ್ನಡ ನಾಡಿನ ಎಲ್ಲೆಗಳನ್ನು 'ಕವಿರಾಜ ಮಾರ್ಗ' ಕೃತಿ ಗುರುತಿಸಿದ್ದರೂ ಕನ್ನಡದ ವ್ಯಾಪ್ತಿ ಇದಕ್ಕಿಂತಲೂ ವಿಸ್ತಾರವಾಗಿದೆ. ಈಗಿನ ಮಹಾರಾಷ್ಟ್ರದ ಕೊಲ್ಲಾಪುರದ ಜೈನ ಮಠದಿಂದ ಆಶ್ರಿತರಿಗೆ ಕನ್ನಡದಲ್ಲೇ ನಿರೂಪಗಳು ಈಗಲೂ ಹೋಗುತ್ತಿರುವುದು ಇದಕ್ಕೊಂದು ಉದಾಹರಣೆ ಎಂದರು. ಗಡಿನಾಡ, ಹೊರನಾಡ ಕನ್ನಡಿಗರು ಮಾತ್ರವಲ್ಲದೆ, ವಿದೇಶಗಳಲ್ಲಿರುವ ಕನ್ನಡಿಗರೂ ಸಹ ನಾನಾ ರೀತಿಯಲ್ಲಿ ಕನ್ನಡದ ನಂಟನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವುದನ್ನು ಸ್ಮರಿಸುತ್ತಾ 'ಅಮೆರಿಕನ್ನಡ' ಪತ್ರಿಕೆಯನ್ನು ಉದಹರಿಸಿದರು.

ಕರ್ನಾಟಕಕ್ಕೆ ಬಹಳ ಪ್ರಾಚೀನ ಇತಿಹಾಸವಿರುವುದನ್ನು ಪ್ರಸ್ತಾಪಿಸಿ, ಮಹಾಭಾರತದಲ್ಲೇ 'ಕರ್ನಾಟಕ'ದ ಉಲ್ಲೇಖ ಇರುವುದು, ಅಶೋಕ ಚಕ್ರವರ್ತಿಯು ಮಹಿಷ ಮಂಡಲ (ಮೈಸೂರು), ಬನವಾಸಿಗಳಿಗೆ ದೂತರನ್ನು ಕಳಿಸಿದ್ದ ಉಲ್ಲೇಖ, ಟಾಲೆಮಿ ಮುಂತಾದ ಪಾಶ್ಚಾತ್ಯ ವಿದ್ವಾಂಸರ ಬರಹಗಳಲ್ಲೂ ಉತ್ತರ ಕರ್ನಾಟಕದ ಕೆಲ ಪ್ರದೇಶಗಳ ಹೆಸರಿರುವುದು – ಇವೇ ಮುಂತಾದುವು ಪ್ರಾಚೀನ ಕರ್ನಾಟಕದ ಸ್ಥಾನಮಾನಗಳನ್ನು ಸೂಚಿಸುತ್ತವೆಂದು ಹಾಲೇಶ್ ಹೇಳಿದರು.

ಕರ್ನಾಟಕ ಎಂಬ ಹೆಸರಿನ ಹುಟ್ಟಿನ ಬಗ್ಗೆ ಇರುವ ಹಲವು ವಾದಗಳನ್ನು ವಿಷದವಾಗಿ ತಿಳಿಸಿದ ಅವರು, ಕರ್ಣ+ಅಟ (ವಿಸ್ತಾರವಾದ ಖ್ಯಾತಿ) ಎಂಬುದಾಗಿ ಸಂಸ್ಕೃತದಿಂದ ಹುಟ್ಟಿತೆಂಬ ವಾದ ಸಕಾರಣವಾಗಿ ಬಿದ್ದುಹೋದುದನ್ನು ವಿವರಿಸಿದರು. ಅಂತೆಯೇ ತಮಿಳು ಶಾಸನಗಳಲ್ಲಿ ಉಲ್ಲೇಖವಾಗಿರುವ ಕರುನಾತರ್, ಕರುನಾಡಿಗರ್ (ಕರು=ವಿಶಾಲ) ಮೊದಲಾದವುಗಳಿಂದ ಈ ಶಬ್ದದ ಉತ್ಪತ್ತಿ ಆಯಿತೆನ್ನುವುದಕ್ಕಿಂತ, ಮಲಯಾಳದ ಕರ್+ನಾಟ್+ಅಗಂ=ಕರಿಯ ಮಣ್ಣಿನ್ನುಳ್ಳ (ಪ್ರದೇಶ) ಎಂಬ ಮೂಲವೇ ವಿದ್ವಾಂಸರ ಮನ್ನಣೆ ಪಡೆದಿದೆಯೆಂದು ಅವರು ವಿಶ್ಲೇಷಿಸಿದರು. ಭಾರತೀಯ ಭಾಷೆಗಳ ಬಗ್ಗೆ ಅಧಿಕಾರಯುತವಾದ ಸಂಶೋಧನೆ ನಡೆಸಿದ ಪಾಶ್ಚಾತ್ಯ ವಿದ್ವಾಂಸರೂ ಈ ವಿವರಣೆಯನ್ನು ಮಾನ್ಯ ಮಾಡಿದ್ದಾರೆಂದರು. ಕರ್ಣರು+ನಟರು ಎಂಬ ಜನಾಂಗಗಳ ಸಮ್ಮಿಳನದಿಂದಾದವರೆಂಬ ಡಾ|| ಶಂ. ಬಾ. ಜೋಷಿಯವರ ವಾದ ಹೆಚ್ಚು ಮನ್ನಣೆ ಪಡೆಯಲಿಲ್ಲವೆಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕೊಪ್ಪ ಪ್ರ ದ. ಕಾಲೇಜು ಪ್ರಿನ್ಸಿಪಾಲ್ ನೊ. ಸಂ. ತಿಮ್ಮೇಗೌಡರು, ಕನಿಷ್ಠ 2200 ವರ್ಷಗಳ ಇತಿಹಾಸವನ್ನು ಹೊಂದಿ ಅತ್ಯಂತ ಸಮೃದ್ಧಿಯನ್ನು ಸಾಧಿಸಿರುವ ಕನ್ನಡ ಈಚಿನ ದಿನಗಳಲ್ಲಿ ಹಿಂದುಳಿಯುತ್ತಿರುವುದಕ್ಕೆ (1) ಕನ್ನಡವನ್ನು ನಾವುಗಳು ಸರಿಯಾಗಿ ಬಳಸದಿರುವುದು, ಹಾಗೂ (2) ಮುಖ್ಯವಾಗಿ ಪಾರಿಭಾಷಿಕ ಪದಗಳಲ್ಲಿ ಕನ್ನಡವೆಂದುಕೊಂಡು ಸಂಸ್ಕೃತ ಪದಗಳನ್ನು ಹೆಣೆದು ತುರುಕಿರುವುದು– ಇವೇ ಕಾರಣವೆಂದು ಖಚಿತವಾಗಿ ಅಭಿಪ್ರಾಯ ಪಟ್ಟರು.

ಉದಾಹರಣೆಯಾಗಿ, ಪ್ರಾಂಶುಪಾಲ, ಅಭಿಯಂತರ, ಆರಕ್ಷಕ (ಅದನ್ನು ಎಲ್ಲರೂ 'ಅರಕ್ಷಕ' ಎಂದೇ ಬಳಸುವುದು!) ಮುಂತಾದ

(3ನೇ ಪುಟಕ್ಕೆ)

## ತಿಳುವಳಿಕೆ | ಕುವೆಂಪು ಅವರ ನಿಸರ್ಗಾನುಭಾವ

ಜರ್ಮನ್ ಕಾದಂಬರಿಕಾರ ಹೆರ್ಮನ್ ಹೆಸ್‌ನ 'ಸಿದ್ಧಾರ್ಥ' ಕಾದಂಬರಿಯಲ್ಲಿ ಅಂಬಿಗನೊಬ್ಬ ಹರಿವ ಹೊಳೆಯ ಪ್ರವಾಹಗಳ ದನಿಗಳನ್ನಾಲಿಸುತ್ತಾ ಆಲಿಸುತ್ತಾ ಜೀವನ ಪ್ರವಾಹದ ರಹಸ್ಯ ಕಂಡುಕೊಂಡು ಬಿಡುತ್ತಾನೆ. ಅಮೇರಿಕನ್ ಕಾದಂಬರಿಕಾರ ಅರ್ನೆಸ್ಟ್ ಹೆಮಿಂಗ್‌ವೇಯ 'The old man and the Sea' ಯಲ್ಲಿನ ಮುದುಕನಿಗೆ ಸಮುದ್ರ, ಬದುಕಿನ ರಹಸ್ಯದ ಉಪದೇಶ ಮಾಡುತ್ತದೆ.

ಅದೇ ರೀತಿ ನಮ್ಮ ಮಲೆನಾಡ ಕವಿ ಶ್ರೀ ಕುವೆಂಪು ಅವರ ಚೇತನ, ವಿಶ್ವ ಮಾನವ ತತ್ವಗಳನ್ನು ಸಾಕ್ಷಾತ್ಕರಿಸಿಕೊಂಡು ಅನಿಕೇತನವಾಗುವುದು – ಈ ಮಲೆನಾಡ ಸಮೃದ್ಧ ನಿಸರ್ಗ ಅವರಿಗೆ ಅನುಭಾವದ ತನ್ಮಯತೆ, ಉನ್ಮೀಲನತೆಗಳ ಅನುಭವ ಕೊಟ್ಟಿದ್ದರಿಂದ. ಅವರ ಕಾವ್ಯ ಸಂವೇದನೆ ಭಾರತೀಯ ವೇದಾಂತ ಮತ್ತು ಕಾವ್ಯ ಮೀಮಾಂಸೆಗಳಿಂದ ಪ್ರಭಾವಿತವಾಗಿದ್ದರೂ, ಭಾರತೀಯ ಜಾತಿ, ಮತ, ದೇಶ, ಧರ್ಮಗಳಲ್ಲಿನ ಸಂಕುಚಿತತೆಯನ್ನು ಮೀರಲು ಅವರಿಗೆ ಸಾಧ್ಯವಾಗುವುದು ಈ ನಿಸರ್ಗಾನುಭಾವದಿಂದಾಗಿ

ಗರಿಕೆ ಹುಲ್ಲಿನ ಮೇಲಿನ ಇಬ್ಬನಿ ಸೂರ್ಯನ ಬೆಳಕಿಗೆ 'ಉರಿ' 'ಕಿಡಿ', 'ಕಿಡಿ', 'ಉರಿ'ಯಾಗಿ ಪ್ರಜ್ವಲಿಸುವುದನ್ನು ಕಂಡು ಅವರು, "ಛೆಗೆ ! ಜಡವೆಂಬುದೆ ಸುಳ್ಳು. ಎಲ್ಲೆಲ್ಲಿಯು ಚೈತನ್ಯ !" ಎನ್ನುವ ಜ್ಞಾನೋದಯದ ರೋಮಾಂಚನ ಅನುಭವಿಸುತ್ತಾರೆ. ಪೌರಾಣಿಕ ಕೃಷ್ಣನ ರಾಸಲೀಲೆ ಕುವೆಂಪು ಅವರ ಕವನದಲ್ಲಿ ನಡೆಯುವುದು–"ವಿಶ್ವದ ಕೇಂದ್ರದ ಬೃಂದಾವನದಲಿ, ಜೀವನ ಯಮುನೆಯ ಕೂಲದಲಿ". ಈ ರಾಸ ಲೀಲೆಯ ಕೇಂದ್ರ, ಭೂಮಿಯ ಗುರುತ್ವಾಕರ್ಷಣೆಯ ಕೇಂದ್ರ. 'ಸ್ವಾಮಿ ಶ್ರೀ ಕೃಷ್ಣನು ದಿವ್ಯ ಪ್ರೇಮಿ'. 'ಅಣು ಅಣುವಿಂ ನೀಹಾರಿಕೆವರೆಗೆ, ತೃಣ ತೃಣದಿಂ ಹಿಮಗಿರಿವರೆಗೆ "ಎಲ್ಲವೂ ಆ ಶಕ್ತಿಯ ಅಧೀನವಾಗಿ ಸುತ್ತುವುದನ್ನು ತಮ್ಮ ನಿಸರ್ಗಾನುಭಾವದ ಪರವಶ ಸ್ಥಿತಿಯಲ್ಲಿ ಈ ಕವಿ ಹಾಡುತ್ತಾರೆ.

ಮತ್ತೂ ಸ್ವಾರಸ್ಯವೆಂದರೆ ಈ ನಿಸರ್ಗಾನುಭಾವ ಕೊಟ್ಟ ತಿಳುವಳಿಕೆಯಿಂದಲೇ ಭಾರತೀಯ ದೇವಸ್ಥಾನ, ದೇವರು, ಧರ್ಮಗಳ ಹುಳುಕುಗಳನ್ನು ಅವರು ಬಯಲಿಗೆಳೆಯುತ್ತಾರೆ. ಅವರ 'ಹೂವು–ದೇವರು' ಕವನದಲ್ಲಿ ದೇವರ ಪೂಜೆಗಾಗಿ ಸುಂದರವಾದ ಹೂಗಳನ್ನು ಕೊಯ್ಯುವ ಪೂಜಾರಿಯನ್ನು–


ಹಕ್ಕಿಯ ಮರಿಗಳ ಕುತ್ತಿಗೆ ಮುರಿದು
ಬೇಡನು ಕೊಲ್ಲುವ ರೀತಿಯಲಿ
ಹೂಗಳ ತೊಟ್ಟನು ತಿರುಪ್ಪಿ ಹರಿದು
ಬುಟ್ಟಿಗೆ ಬಿಡುವನು 'ಪ್ರೀತಿ'ಯಲಿ

—ಎಂದು ತರಾಟೆಗೆ ತೆಗೆದುಕೊಳ್ಳುತ್ತಾರೆ.

ಕಬೀರ, ಕನಕ, ಬ್ಲೇಕ್, ಅಲ್ಲಮ, ಅಕ್ಕಮಹಾದೇವಿ ಮುಂತಾದ ಅನುಭಾವಿಗಳೆಲ್ಲ ಹಾಗೆ ದೇವರು, ಮತ, ಧರ್ಮಗಳ ಸಾಂಸ್ಥಿಕ ಸಂಕುಚಿತತೆಗಳನ್ನು ತರಾಟೆಗೆ ತೆಗೆದುಕೊಂಡವರೇ. ನಮ್ಮ ಮಲೆನಾಡ ಕವಿ ಕುವೆಂಪು ಅವರಿಗೆ ಅಂತಹಾ 'ಕ್ರಾಂತಿಕಾರೀ ಅನುಭಾವ' ಸಾಧ್ಯವಾದದ್ದು ಮಲೆನಾಡ ನಿಸರ್ಗದ ಕಾಡು, ಬೆಟ್ಟ, ಬಾನು, ಬಂಡೆ, ಹೊಳೆ, ಪ್ರಾಣಿ, ಪಕ್ಷಿ ಸಹಸ್ರಗಳ ಜೀವ ಸ್ಪಂದನಗಳಿಂದಾಗಿ ಎನ್ನುವುದನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು.

ಆ ಅನುಭಾವದ ಮುಕ್ತ ಸ್ಥಿತಿಯಲ್ಲೇ ಕುವೆಂಪು ತಮ್ಮ ವಿಶ್ವಮಾನವ ತತ್ವ ಪ್ರಣಾಳಿಕೆಯಲ್ಲಿ ಘೋಷಿಸಿದ್ದು: "'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು"

— 'ವದನ' ಶೃಂಗೇರಿ.




### ಪುಟ್ಟಿ ಕಿಟ್ಟಿ

ಪುಟ್ಟಿ ಕಿಟ್ಟಿ
ಸೇರಿಕೊಂಡು
ಅಡಿಗೆ ಆಡುತಿದ್ದರು

ಅಡಿಗೆ ಆಟ ಸಾಕು
ಇನ್ನು 'ಮದುವೆ'
ಆಡೋಣ ಎಂದರು

ಗೊಂಬೆಗಳ
ಎರಡು ತಂದು
ಗಂಡು ಹೆಣ್ಣು ಎಂದರು

ಹರಕು ಬಟ್ಟೆ
ಹಗ್ಗ ಕಟ್ಟಿ
ತಾಳಿ, ಸೀರೆ ಎಂದರು

ಗಡಿಗೆ, ಗರಟೆ
ತಂದುಕೊಂಡು
ಅಡಿಗೆಗೆಂದು ಇಟ್ಟರು

ಮಣ್ಣು ಎರಚಿ
ಮದುವೆ ಮುಗಿಸಿ
ಮನೆಗೆ ಊಟಕ್ಕೋಡಿದರು.

—ಬಾಣಂಕಿ ಪ್ರಕಾಶ್,
ಕುಡಿನಲ್ಲಿ.

### ಪೆದ್ದ

ಪೆದ್ದನೊಬ್ಬ ಇದ್ದನು
ನನ್ನ ಜೊತೆಯಲಿ
ಇಡೀ ಶಾಲೆಗೆ ಮೊದಲಿಗನು
ದಡ್ಡತನದಲಿ

ಪರೀಕ್ಷೆಯು ಸಮೀಪಿಸಲು
ನಡಗುತ್ತಿದ್ದನು
"ಈ ಸಲ ಪಾಸ್ ಮಾಡೆಂದು"
ದೇವರ ಬೇಡುತ್ತಿದ್ದನು

ಪರೀಕ್ಷೆಯ ಉತ್ತರ ಪತ್ರಿಕೆಯಲ್ಲಿ
ಬರೆದನು ಹೀಗೆ—
"ಈ ಎಲ್ಲಾ ಪ್ರಶ್ನೆಗೆ ಉತ್ತರವನ್ನು
ದೇವರು ಬರೆಯುವನು"

ಗುರುಗಳು ನೋಡಿದರು
ಉತ್ತರ ಪತ್ರಿಕೆಯನ್ನು
ಕೊಟ್ಟರು ನಂಬರು
ಎಷ್ಟೆಂದು ಗೊತ್ತೇ?

ಎಲ್ಲಾ ಪ್ರಶ್ನೆಗೂ ಉತ್ತರವನ್ನು
ದೇವರು ಸರಿಯಾಗಿ ಬರೆದಿದ್ದಕ್ಕೆ

ದೇವರಿಗೆ ನೂರಕ್ಕೆ ನೂರು ;
ನಿನಗ್ಮಾತ್ರ ನೂರಕ್ಕೆ
ಸೊನ್ನೆ ನಂಬರು !

ನಂಬರು ನೋಡಿದ ಪೆದ್ದನಿಗೆ
ಬಹಳ ದುಃಖವಾಯಿತು
ಇನ್ನು ಮುಂದೆ ಓದುವೆನೆಂದು
ಪಣ ತೊಟ್ಟನು, ಜಾಣನಾದನು.

ಎಚ್. ಸಿ ಪ್ರವೀಣ್ ಕುಮಾರ್,
7ನೇ ತರಗತಿ, ಹುಲ್ಕೋಡು.

# ಕುವೆಂಪು ಗೌರವಾರ್ಥ ಉದ್ದೇಶಿತ ಕಾಮಗಾರಿಗಳನ್ನು ಕೇಂದ್ರಸ್ಥಳವಾದ ಗಡಿಕಲ್‌ನಲ್ಲಿ ಕಾರ್ಯಗತಗೊಳಿಸಲು ಆಗ್ರಹ

ಮಹಾ ಕವಿ ಕುವೆಂಪುರವರ ಜನ್ಮಸ್ಥಳವಾದ ಅವರ ತಾಯಿಯ ತೌರು ಹಿರಿಕೊಡಿಗೆಯಲ್ಲಿ ಚಿಕ್ಕಮಗಳೂರು ಜಿಲ್ಲಾ ಪರಿಷತ್ತು ನಿರ್ಮಿಸಲು ಉದ್ದೇಶಿಸಿರುವ 'ವಿಶ್ವಮಾನವ ಸಂದೇಶ ಭವನ'ವನ್ನು ಹಿರಿಕೊಡಿಗೆ ಮತ್ತು ಕುಪ್ಪಳಿಗಳ ಮಧ್ಯದಲ್ಲಿ ಹತ್ತಾರು ಹಳ್ಳಿಗಳ ಕೇಂದ್ರ ಸ್ಥಳವೂ, ಸಾಕಷ್ಟು ಜನವಸತಿ ಇರುವಂಥದೂ ಆದ ಗಡಿಕಲ್ಲಿನಲ್ಲಿ ನಿರ್ಮಿಸಬೇಕೆಂದು ಅ. 2ರಂದು ಗಡಿಕಲ್ಲಿನಲ್ಲಿ ನಡೆದ ವಿಚಾರ ಗೋಷ್ಠಿಯಲ್ಲಿ ಒಮ್ಮತದ ಅಭಿಪ್ರಾಯ ಪಡಲಾಯಿತು.

ಆಂಜನೇಯ ಯುವಕ ಸಂಘ ಈ ವಿಚಾರ ಗೋಷ್ಠಿ ಏರ್ಪಡಿಸಿತ್ತು. ಕೊಪ್ಪ ಪ್ರ.ದ. ಕಾಲೇಜಿನ ಪ್ರಿನ್ಸಿಪಾಲ್ ನೋ. ಸಂ. ತಿಮ್ಮೇಗೌಡ ಅಧ್ಯಕ್ಷತೆ ವಹಿಸಿದ್ದು, ಶೃಂಗೇರಿ ಕಾಲೇಜಿನ ಉಪನ್ಯಾಸಕರಾದ ಕೆ. ಪುಟ್ಟಯ್ಯ, ಹಯವದನ ಉಪಾಧ್ಯ, ತೀರ್ಥಹಳ್ಳಿ ಕಾಲೇಜು ಉಪನ್ಯಾಸಕರುಗಳಾದ ಜೆ. ಕೆ. ರಮೇಶ್, ಎಲ್. ಸಿ. ಸುಮಿತ್ರ, ಜಿ. ಕೆ. ಶ್ರೀಕಂಠ ಮೂರ್ತಿ ಮುಖ್ಯ ಭಾಷಣಕಾರರಾಗಿದ್ದರು.

ಒಂದೂವರೆ ಲಕ್ಷ ರೂ. ಗಳಲ್ಲಿ ಭವನವನ್ನು ನಿರ್ಮಿಸಲು ಜಿ. ಪ. ನಿರ್ಧರಿಸಿದೆ. ಅಲ್ಲದೆ 35 ಸಾವಿರ ರೂ. ವೆಚ್ಚದಲ್ಲಿ ಈಗಾಗಲೇ ಗ್ರಂಥಾಲಯವೊಂದನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆದರೆ ಗ್ರಂಥಾಲಯ, ವಾಚನಾಲಯ, ವಿಶ್ರಾಂತಿ ಗೃಹ, ಸಭಾಂಗಣ ಮುಂತಾದುವುಗಳಿಗಾಗಿ ವೆಚ್ಚವಾಗುವ ಲಕ್ಷಾಂತರ ರೂ. ಹಣ ಸಾರ್ವಜನಿಕರಿಗೆ ಸತತವಾಗಿ ಪ್ರಯೋಜನಕ್ಕೆ ಬರುವಂತಿರಬೇಕು. ಅದಲ್ಲದೆ ಹಿರಿಕೊಡಿಗೆಯಂಥ ಮೂಲೆಯೊಂದೆಡೆ ಇಟ್ಟರೆ ದುರಾಚಾರಿಗಳು, ಕುಡುಕರು ಮುಂತಾದವರ ದುರುಪಯೋಗಕ್ಕೊಳಗಾಗಬಹುದು; ಅಲ್ಲಿನ ನೈಸರ್ಗಿಕ ಪರಿಸರ ನಾಶವಾಗಬಹುದು, ಅಲ್ಲದೆ ಅಂಥವರಿಂದ ಸ್ಥಳೀಯರಿಗೂ ಕಿರುಕುಳ ಉಂಟಾಗಬಹುದು ಎಂದು ಆತಂಕ ವ್ಯಕ್ತವಾಯಿತು.

ಭಾಷಣಕಾರರಲ್ಲದೆ, ಯುವಕ–ಯುವತಿ ಮಂಡಲಿಗಳ ಸದಸ್ಯರು, ಸೇವಂಗಿ ಮತ್ತು ಹರಂದೂರು ಮಂಡಲಗಳ ಹಲವು ಸದಸ್ಯರು, ಸ್ಥಳೀಯ ನಾಗರಿಕರು, ಸುತ್ತಮುತ್ತಲ ಸಾಹಿತ್ಯಾಸಕ್ತರು, ಕುವೆಂಪು ಅಭಿಮಾನಿಗಳು, ಪತ್ರಕರ್ತರು, ಮುಂತಾಗಿ 200ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದ ಈ ಗೋಷ್ಠಿ, ಈ ವಿಚಾರದಲ್ಲಿ ವಿಷದವಾಗಿ ಚರ್ಚಿಸಿ, ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿತಲ್ಲದೆ, ಅವುಗಳನ್ನು ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿಗೂ, ಈ ಯೋಜನೆಗಳ ಪ್ರೇರಕರಾದ ಕುವೆಂಪು ಟ್ರಸ್ಟ್‌ನ ಸಂಚಾಲಕ ಪ್ರೊ|| ದೇ. ಜವರೇಗೌಡರಿಗೂ ತಲುಪಿಸಿ, ಅವರುಗಳೊಂದಿಗೆ ವಿವರವಾಗಿ ಸಮಾಲೋಚಿಸಲು ಆಂಜನೇಯ ಯುವಕ ಸಂಘವನ್ನು ಕೇಳಿಕೊಂಡಿತು.

"ಈಗಾಗಲೇ ಚಿಕ್ಕಮಗಳೂರು ಜಿಲ್ಲಾ ಪರಿಷತ್, ಕುವೆಂಪು ಜನ್ಮಸ್ಥಳವಾದ ಹಿರೇಕೊಡಿಗೆಯಲ್ಲಿ ಹಲವು ಕಾಮಗಾರಿಗಳನ್ನು ನಡೆಸಲು ಸನ್ನದ್ಧವಾಗಿದೆ. "ವಿಶ್ವಮಾನವ ಸಂದೇಶ" ದಂತಹ ಸಾರ್ವತ್ರಿಕವೂ ಸಾರ್ವಕಾಲಿಕವೂ ಆದ ತಾತ್ವಿಕ ಕೊಡುಗೆಯೊಂದನ್ನು ಜಗತ್ತಿಗೆ ಇತ್ತ ಚೇತನವೊಂದಕ್ಕೆ ಗೌರವ ಸೂಚಕವಾಗಿ ಜಿಲ್ಲಾ ಪರಿಷತ್ತು ವಹಿಸಿರುವ ಈ ಕಾಳಜಿ ಸ್ತುತ್ಯರ್ಹ ಮತ್ತು ಸಮಯೋಚಿತ. ಆದರೆ ಈ ಕಾಮಗಾರಿಗಳಿಗೆ ಆಯ್ದುಕೊಂಡಿರುವ ಸ್ಥಳದ ಬಗ್ಗೆ ಸ್ಥಳೀಯ ಹಿರಿಯರಲ್ಲೂ, ಸಾಹಿತ್ಯಾಸಕ್ತರಲ್ಲೂ ಭಿನ್ನಾಭಿಪ್ರಾಯವಿರುವ ಹಿನ್ನೆಲೆಯಲ್ಲಿ ಈ ಸಭೆ ಈ ಕೆಳಗಿನಂತೆ ಶಿಫಾರ್ಸು ಮಾಡಲು ನಿರ್ಣಯಿಸಿದೆ:

1. ಹಿರೇಕೊಡಿಗೆಯಲ್ಲಿ ಕುವೆಂಪು ಜನ್ಮಸ್ಥಳವನ್ನು ಸೂಚಿಸಲು ಸಾಂಕೇತಿಕವಾಗಿ ಮಂಟಪದಂತಹ ರಚನೆಯನ್ನು ಮಾತ್ರ ನಿರ್ಮಿಸುವುದು. ಅಲ್ಲಿ 'ಪಂಚ ಮಂತ್ರ' ಮತ್ತು 'ಸಪ್ತ ಸೂತ್ರ'ಗಳನ್ನು ಒಳಗೊಂಡ ವಿಶ್ವಮಾನವ ಸಂದೇಶದ ಫಲಕಗಳನ್ನು ಸ್ಥಾಪಿಸುವುದು. ಅಲ್ಲಿ ಈ ಉದ್ದೇಶಕ್ಕಾಗಿ ದಾನ ನೀಡಲಾಗಿರುವ 4 ಗುಂಟೆ ಭೂಮಿಯಲ್ಲಿ ಹೂವಿನ ತೋಟ ಬೆಳೆಸುವುದು. ಯಾವುದೇ ರೀತಿಯಲ್ಲಿ ಅಲ್ಲಿಯ ಸುತ್ತಲ ನಿಸರ್ಗವನ್ನು ಹಾಳಾಗದಂತೆ ಕಾಪಾಡುವುದು ಹಾಗೂ ಅದನ್ನು ಸಮೃದ್ಧವಾಗಿ ಅಭಿವೃದ್ಧಿ ಪಡಿಸುವುದು.

2. ಜಿಲ್ಲಾ ಪರಿಷತ್‌ನವರು ಯೋಜಿಸಿರುವ ಬೃಹತ್ ಕಟ್ಟಡ ಸಮುಚ್ಚಯವನ್ನು (ಭವನ, ಗ್ರಂಥಾಲಯ, ವಸತಿಗೃಹ ಇತ್ಯಾದಿ) ಹಿರೇಕೊಡಿಗೆ ಮತ್ತು ಕುಪ್ಪಳಿ ಇವುಗಳ ನಡುವಿನ ಅಂತರದಲ್ಲಿರುವ ಗಡಿಕಲ್ಲಿನಲ್ಲಿ ನಿರ್ಮಿಸುವುದು.

3. ಕುಪ್ಪಳಿಯಲ್ಲಿರುವ ಕುವೆಂಪುರವರ ಮನೆಯನ್ನು ಈಗಿರುವ ಸ್ಥಿತಿಯಲ್ಲೇ ಸರ್ಕಾರ ವಹಿಸಿಕೊಂಡು ಅದನ್ನೊಂದು ರಾಷ್ಟ್ರೀಯ ಸ್ಮಾರಕವಾಗಿ ಉಳಿಸಿಕೊಳ್ಳಬೇಕು.

(4ನೇ ಪುಟಕ್ಕೆ)

# ಆಧುನಿಕ ಕಾಲದಲ್ಲಿ ಹಿಂದುಳಿಯುತ್ತಿರುವ ಕನ್ನಡ

(2ನೇ ಪುಟದಿಂದ)

ಶಬ್ದಗಳನ್ನು ಉಲ್ಲೇಖಿಸಿದ ಅವರು, ಇಂದಿನ ವಿಜ್ಞಾನದ ಪಠ್ಯ ಪುಸ್ತಕಗಳಂತೂ ಈ ಸಂಸ್ಕೃತ ಪಾರಿಭಾಷಿಕಗಳಿಂದಾಗಿ ವಿದ್ಯಾರ್ಥಿಗಳಿಗೆ ಅರ್ಥವೇ ಆಗುತ್ತಿಲ್ಲ. ಕನ್ನಡ ಅನಾದಿಯಿಂದಲೂ ಸಂಸ್ಕೃತ, ಪಾರಸಿ, ಇಂಗ್ಲಿಷ್ ಮುಂತಾದ ನಾನಾ ಭಾಷೆಗಳಿಂದ ಪದಗಳನ್ನು ತೆಗೆದುಕೊಂಡು ತನ್ನದಾಗಿ ಅರಗಿಸಿಕೊಳ್ಳುತ್ತ ಬಂದಿರುವುದರಿಂದಲೇ ಸಮೃದ್ಧವಾಗಿ ಬೆಳೆಯಿತು. ಆದರೆ ಸಂಸ್ಕೃತ ತನ್ನ ಮಡಿವಂತಿಕೆಯಿಂದಾಗಿ ಹೊರಗಿನ ಶಬ್ದಗಳನ್ನು ಸ್ವೀಕರಿಸದಿದ್ದುದರಿಂದ ಇಂದು ಜನ ಬಳಕೆಗೆ ಅನರ್ಹವಾಗಿ 'ಸತ್ತ ಭಾಷೆ' ಎನ್ನಿಸಿಕೊಂಡಿದೆ. ಕನ್ನಡ ಬಳಕೆಯ ಬಗ್ಗೆ ನಮ್ಮ ಅನಾದರ ಹಾಗೂ ಈ ಸಂಸ್ಕೃತ ವ್ಯಾಮೋಹದಿಂದ ಕನ್ನಡಕ್ಕೂ ಇದೇ ಗತಿ ಬಂದರೂ ಆಶ್ಚರ್ಯವಿಲ್ಲ ಎಂದರು.

ಕುರ್ಚಿ, ಮೇಜು, ಪೋಲೀಸು, ಕಾಲೇಜು, ಬಸ್ಸು ಮೊದಲಾದ ಶಬ್ದಗಳೆಲ್ಲ ಬೇರೆ ಭಾಷೆಯವಾದರೂ ಕನ್ನಡದಲ್ಲಿ ಹೊಂದಿಕೆಯಾಗಿ ಹೋಗಿವೆ. ಹೀಗೆ ದಿನ ಬಳಕೆಯ ಶಬ್ದಗಳ ಬಗ್ಗೆ ಮಡಿವಂತಿಕೆ, ವ್ಯಾಮೋಹ ಬಿಟ್ಟು ಕನ್ನಡವನ್ನು ಬೆಳೆಸಬೇಕಾಗಿದೆ ಎಂದರು.

ಮೇಲೆ ಹೇಳಿದ ಕಾರಣದಿಂದ ಸಂಸ್ಕೃತ ಶಬ್ದಗಳು, ಭಾರತದ ಎಲ್ಲ ಭಾಷೆಗಳಲ್ಲೂ ಇವೆ. ಆದರೆ ಉತ್ತರ ಭಾರತದ ಭಾಷೆಗಳು ಸಂಸ್ಕೃತ ಜನ್ಯವಾದವೂ, ಇಂಗ್ಲಿಷ್ ಮುಂತಾದುವು ಸಂಸ್ಕೃತದ ಸೋದರ ಭಾಷೆಗಳೂ ಆಗಿದ್ದು, ಕನ್ನಡ, ತಮಿಳು, ತುಳು, ಮಲಯಾಳ, ಕೊಡವ ಮುಂತಾದ 21 ಭಾಷೆಗಳು ಮೂಲ ಭಾರತೀಯ ಸ್ವತಂತ್ರ ಭಾಷೆಗಳು ಎಂದು ನೊಸರತಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಎ. ಮನೋಹರ ರಾವ್‌ರವರು ತಮ್ಮ ಸರಳ, ಮುಗ್ಧ ಮಾತುಗಳಿಂದ ಸಭಿಕರ ಮನಸ್ಸನ್ನು ತಟ್ಟಿದರು. ಸಾಹಿತ್ಯದಲ್ಲಿ ಪರಿಶ್ರಮವಿಲ್ಲದಿದ್ದರೂ ಸಾಹಿತ್ಯ ಚಟುವಟಿಕೆಗೆ ಪ್ರೋತ್ಸಾಹ ಕೊಡುವುದು ನಮ್ಮೆಲ್ಲರ ಕರ್ತವ್ಯ. ನಮ್ಮಲ್ಲಿ ಮಾತೃ ಭಾಷೆಯ ಅಭಿಮಾನ ಕುಂದುತ್ತಿದೆ, ಪರ ಭಾಷಾ ವ್ಯಾಮೋಹ ವಿಷದಂತೆ ಹಬ್ಬುತ್ತಿದೆ. ಇದು ನಮ್ಮ ಪೀಳಿಗೆಗೇ ಮಾರಕವಾಗುವುದನ್ನು ತಡೆಯಲು ನಾವೆಲ್ಲ ನಮ್ಮಿಂದಾಗುವ ಕೆಲಸಗಳನ್ನು ಮಾಡಬೇಕಾಗಿದೆ ಎಂದು ಕಳಕಳಿಯಿಂದ ಕರೆ ನೀಡಿದರು. ತಮ್ಮನ್ನು, ತಮ್ಮಂಥ ಹಲವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿ ಮಾಡುವ ಮೂಲಕ ತಮಗೆ ಇಂಥ ಸಾಹಿತ್ಯ–ಸಂಸ್ಕೃತಿಗಳ ಒಡನಾಟವನ್ನು ಒದಗಿಸಿದ ಹೆ. ಪ. ಗಣಪತಿ ಪ್ರಭುಗಳ ಕನ್ನಡ ನಿಷ್ಠೆಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

ಈ ತಾಲ್ಲೂಕಿನಲ್ಲಿರುವ ಸುಮಾರು ಒಂದು ನೂರಕ್ಕೂ ಹೆಚ್ಚು ಮಂದಿ ಆಜೀವ ಸದಸ್ಯರಲ್ಲಿ ಹೆಚ್ಚಿನವರನ್ನು ಸಂಪರ್ಕಿಸಲು ಈ ಕಾರ್ಯಕ್ರಮದ ಮೊದಲು ತಾ|| ಸಮಿತಿಗೆ ಸಾಧ್ಯವಾಗದಿದ್ದ ಬಗ್ಗೆ ವಿಷಾದಿಸಿದ ತಾ|| ಸಮಿತಿ ಕಾರ್ಯದರ್ಶಿ ಕೆ. ಸಿ. [illegible], ಮುಂದಿನ ಕಾರ್ಯಕ್ರಮ ಹಮ್ಮಿಕೊಳ್ಳುವ ಮೊದಲು ಅವರೆಲ್ಲರನ್ನೂ ಸಂಪರ್ಕಿಸಿ ಕಾರ್ಯಕ್ರಮಗಳಿಗೆ ಆಹ್ವಾನಿಸುವಂತೆ ಮತ್ತು ಸಮಿತಿಯ ಚಟುವಟಿಕೆ[illegible]ಲ್ಗೊಳ್ಳುವಂತೆ ಕ್ರಮಿಸುವುದಾಗಿ [illegible]ಯಿತ್ತರು.

# ಕೊಪ್ಪ ಪುರಸಭೆಯ ಕಡಿಮೆ ವೆಚ್ಚದ ನಿವೇಶನಗಳ ಫಲಾನುಭವಿಗಳಿಗೆ ಅನ್ಯಾಯ: ಡಿ.ಸಿ.ಗೆ ದೂರು

ಕೊಪ್ಪ : ಮನೆ–ನಿವೇಶನ ರಹಿತರಿಗೆ ನಿವೇಶನ ಹಂಚಲು ಇಲ್ಲಿನ ಮೇಲಿನಪೇಟೆಯಲ್ಲಿ (ಆರೂರ್ ಶಾಲೆ ಹಿಂಭಾಗ) ಪುರಸಭೆಯವರು 10 ಎಕರೆ ಪ್ರದೇಶದಲ್ಲಿ ವಿಸ್ತರಣ ನಿರ್ಮಿಸಿದ್ದು, ಅದರಲ್ಲಿ ದುರ್ಬಲ ವರ್ಗದವರ ಹಿತಕ್ಕೆ ವಿರುದ್ಧವಾದ ಹಲವು ಕ್ರಮಗಳನ್ನು ಆಡಳಿತ ವರ್ಗ ಕೈಗೊಂಡಿದೆಯೆಂದು ಪುರಸಭೆಯ (ಮಧ್ಯಂತರ ಮಂಡಲ) ಇಬ್ಬರು ಹಿರಿಯ ಸದಸ್ಯರಾದ ಶೀನ ಭಂಡಾರಿ ಮತ್ತು ಎಂ. ಎಸ್. ನಾರಾಯಣ ಜಿಲ್ಲಾಧಿಕಾರಿಗಳಿಗೆ ದೂರಿದ್ದಾರೆ.

ದುರ್ಬಲ ವರ್ಗದವರಿಗೆ ಇಲ್ಲಿನ ನಿವೇಶನಗಳನ್ನು ಹಂಚುವ ಬಗ್ಗೆ ಸರ್ಕಾರದಿಂದ ಮಾರ್ಗದರ್ಶಕ ಆದೇಶವೊಂದು ಬಂದಿದ್ದು, ಈ ನಿವೇಶನ ಪಡೆಯುವ ಫಲಾನುಭವಿಗಳಿಂದ ನಿವೇಶನಗಳ ಅಭಿವೃದ್ಧಿ ವೆಚ್ಚದ ಅರ್ಧ ಭಾಗ ಮತ್ತು ಕಾಲು ಭಾಗವನ್ನು ಪಾವತಿ ಮಾಡುವ ಬಗ್ಗೆ ಅವರುಗಳಿಂದ ಒಪ್ಪಿಗೆ ಪ್ರಮಾಣ ಪತ್ರ (ಅಗ್ರಿಮೆಂಟ್) ಪಡೆಯತಕ್ಕದ್ದು ಎಂದಿದೆ. ಅಭಿವೃದ್ಧಿ ವೆಚ್ಚದ ಉಳಿದ ಅಂಶವನ್ನು ಹರಾಜಿಗಾಗಿ ಇಟ್ಟಿರುವ 25 ನಿವೇಶನಗಳಿಂದ ಸರಿತೂಗಿಸತಕ್ಕದ್ದಾಗಿದೆ.

ಈ ಎಲ್ಲ ಸೈಟುಗಳನ್ನೂ ಒಟ್ಟಿಗೆ ಪರಿಗಣಿಸಿ ಅಭಿವೃದ್ಧಿ ವೆಚ್ಚ ಲೆಕ್ಕ ಹಾಕಿದರೆ ಚದರ ಅಡಿಗೆ ರೂ. 1-50ರಿಂದ 1–75ರೊಳಗೆ ತಗಲಬಹುದು ಆದರೆ ಪುರಸಭೆ ಚ.ಅ.ಗೆ ರೂ. 2ರಂತೆ ಈ ಬಡ ಫಲಾನುಭವಿಗಳಿಗೆ ವಿಧಿಸಿದೆ. ಇದರಿಂದ ಫಲಾನುಭವಿಗಳಿಗೆ ಸುಮಾರು 200ರಿಂದ 400 ರೂ.ಗಳಷ್ಟು ಹೆಚ್ಚು ಹೊರೆ ಬೀಳುವುದು ಎಂದು ಈ ಸದಸ್ಯರು ಶಂಕಿಸುತ್ತಾರೆ.

ದರ ನಿಗದಿಯ ವಿಚಾರವನ್ನು ಮಂಡಲದ ಸಭೆಯಲ್ಲಿ ಕೂಡ ಚರ್ಚೆಗೆ ತರದೆ ಏಕ ಪಕ್ಷೀಯವಾಗಿ ನಿರ್ಧರಿಸಲಾಗಿದೆ. ಅಷ್ಟೇ ಅಲ್ಲ, ಈ ಹಣವನ್ನು ಪೂರ್ತಿಯಾಗಿ 15 ದಿನದೊಳಗೆ ಪಾವತಿಸಬೇಕು; ತಪ್ಪಿದಲ್ಲಿ ಅಂಥವರಿಗೆ ನಿವೇಶನ ಮಂಜೂರಾಗಿರುವುದನ್ನು ರದ್ದು ಪಡಿಸಲಾಗುವುದು ಎಂದು ನೋಟೀಸ್ ಕೂಡ ಜಾರಿ ಮಾಡಿದ್ದಾರೆ. ಇದು ಸರ್ಕಾರಿ ಆದೇಶಕ್ಕೆ ವ್ಯತಿರಿಕ್ತ ಮತ್ತು ಇದಕ್ಕೆ ಮಂಡಲದ ಆಡಳಿತ ವರ್ಗದವರ ಯಾವುದೇ ಸಮರ್ಥನೆ ಸಾಧುವಾದುದಲ್ಲ ಎಂದೂ ಸದಸ್ಯರು ದೂರಿದ್ದಾರೆ.

ಹರಾಜು ನಿವೇಶನಗಳ ವಿತರಣೆಗಾಗಿ ಕೈಗೊಂಡಿರುವ ಕ್ರಮಗಳು ಕೂಡ ಅಸಮರ್ಪಕ ಎಂದೂ ಅವರು ತಿಳಿಸಿದ್ದು, ಈ ಬಗ್ಗೆ ಮಂಡಲದವರು ಕ್ರಮ ಜಾರಿ ಮಾಡದಂತೆ ತಡೆ ನೀಡಿ, ಸರ್ಕಾರದ ಆದೇಶದಂತೆಯೇ ನಡೆದುಕೊಳ್ಳುವಂತೆ ಮಾರ್ಗದರ್ಶನ ನೀಡಬೇಕೆಂದು ಕೋರಿದ್ದಾರೆ.

# ಸಂಕ್ಷಿಪ್ತ ಸುದ್ದಿಗಳು

### ಬೀಳ್ಕೊಡುಗೆ

ಕೊಪ್ಪ : ಇಲ್ಲಿಂದ ಮಣಿಪಾಲಕ್ಕೆ ವರ್ಗವಾಗಿರುವ ಪೋಸ್ಟ್ ಮಾಸ್ಟರ್ ಸಿ.ಅಚ್ಯುತ ನಾಯಕ್ ಮತ್ತು ಪೋಸ್ಟ್‌ಮನ್ ಆಗಿ ಬಡ್ತಿ ಹೊಂದಿ ಕಡೂರಿಗೆ ವರ್ಗವಾಗಿರುವ ಎಸ್ ಪುಂಡಲೀಕ ಇವರಿಗೆ ಅಂಚೆ ಮನರಂಜನಾ ಕೂಟದಿಂದ ಹಾರ್ದಿಕ ಬೀಳ್ಕೊಡುಗೆ ನೀಡಲಾಯಿತು ಹಾಗೂ ನೂತನ ಪೋಸ್ಟ್ ಮಾಸ್ಟರ್ ಸದಾಶಿವ ಚಡಗ ಇವರಿಗೆ ಹಾರ್ದಿಕ ಸ್ವಾಗತ ನೀಡಲಾಯಿತು. ಜಿ. ಎಸ್. ನಾರಾಯಣ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕೆ.ಎಸ್ ಕೃಷ್ಣಮೂರ್ತಿ ಸ್ವಾಗತಿಸಿ ಕೆ ಎಸ್. ಕೇಶವ ವಂದಿಸಿದರು. (ವರದಿ : ಬಿ. ಕೃಷ್ಣರಾವ್)

### ಕ್ರೀಡಾಕೂಟಕ್ಕೆ ನೋಂದಣಿ

ತೆಂಗಿನಮನೆಯಲ್ಲಿ ಅ. 15 ರಂದು ನಡೆಯುವ ಗ್ರಾಮೀಣ ಮತ್ತು ಮಹಿಳಾ ಕ್ರೀ॥ ಕೂಟಕ್ಕೆ ಸ್ಪರ್ಧಿಗಳು ಅ 14ರ ಸಂಜೆ ಅಥವಾ 15ರ ಬೆಳಿಗ್ಗೆ 9 ಗಂಟೆಯೊಳಗೆ ಅಲ್ಲಿನ ಎಲ್. ಜಿ. ಕುಲಾಸೊ ಸ್ಮಾರಕ ಕ್ರೀಡಾಂಗಣದಲ್ಲಿರುವ ಸ್ಟಾರ್ ಸ್ಪೋರ್ಟ್ಸ್ ಅಸೋಸಿಯೇಶನ್ ಕಛೇರಿಯಲ್ಲಿ ಹೆಸರು ನೊಂದಾಯಿಸಿಕೊಳ್ಳಬೇಕು.

### ಗ್ರಾಮಾಂತರ ರಸ್ತೆ

ಜವಾಹರ್ ರೋಜ್‌ಗಾರ್ ಯೋಜನೆಯಡಿ 30 ಸಾವಿರ ರೂ. ವೆಚ್ಚದಲ್ಲಿ ಅಗಳಗಂಡಿ ಮಂಡಲದ ದಿಟ್ಟಿಕೊಪ್ಪ-ಹೊಸನೆಲ-ಕಕ್ಕದ್ದೆ-ಕಚಿಗೆ ಗ್ರಾಮಾಂತರ ರಸ್ತೆಯ ಗುದ್ದಲಿ ಪೂಜೆಯನ್ನು ಮಂಡಲ ಪ್ರಧಾನ ಕೆ. ಸಿ. ಸತೀಶ್ ಗಾಂಧಿ ಜಯಂತಿಯಂದು ನೆರವೇರಿಸಿದರು. ಎಚ್. ಟಿ. ರಾಮಪ್ಪ ಗೌಡ, ಡಿ. ಎಲ್. ಶ್ರೀನಿವಾಸ್, ಕೆ. ಎಸ್. ಶಂಕರಪ್ಪನಾಯ್ಕ್, ಜಯಂತ್ ಹಾಜರಿದ್ದರು. (ವರದಿ : ಶಂ.ನ. ಶೇಷಗಿರಿ)

## ಕ್ರಿಯಾಶೀಲ ಮಹಿಳೆಯರಿಂದ ದೇಶದ ಸರ್ವೋನ್ನತಿ

ಹರಿಹರಪುರ : ಕ್ರಿಯಾಶೀಲರಾದ ಮಹಿಳೆಯರಿಂದ ದೇಶದ ಸರ್ವೋನ್ನತಿ ಸಾಧ್ಯ ಎಂದು ಇಲ್ಲಿನ ರಾಷ್ಟ್ರೋತ್ಥಾನ ಬಳಗ ಮಹಿಳೆಯರಿಗಾಗಿ ನಡೆಸಿದ ಸಂಸ್ಕೃತ ಸಂಭಾಷಣಾ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷೆ ಶ್ರೀದೇವಿ ರಾಘವಾಚಾರ್ ಅಭಿಪ್ರಾಯ ಪಟ್ಟರು. ದತ್ತಾತ್ರೇಯ ಭಟ್ ಮುಖ್ಯ ಅತಿಥಿಯಾಗಿದ್ದರು.

ಮೊದಲಿಗೆ ಎಚ್. ಎಸ್. ಶಿವಸ್ವಾಮಿಯವರ ನೇತೃತ್ವದಲ್ಲಿ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನ ಆಚರಿಸಲಾಯಿತು. ನಗೆ ಹನಿ, ಹಾಡುಗಳು, ಪ್ರಚಾರ, ವಸ್ತ್ರ ವಿನ್ಯಾಸ ಮುಂತಾದುವನ್ನೊಳಗೊಂಡ ಮನರಂಜನಾ ಕಾರ್ಯಕ್ರಮವನ್ನು ಶಿಬಿರಾರ್ಥಿಗಳು ಸಂಸ್ಕೃತದಲ್ಲೇ ನಡೆಸಿದರು.

(ವರದಿ : ಜೆ.ಆರ್ ಎಸ್. ಪ್ರಕಾಶ್)

### ಬಾಲಿಕಾ ಪ್ರೌಢ ಶಾಲೆಯ 'ಸಾಹಸ ಕೂಟ'

ಶೃಂಗೇರಿ : ಇಲ್ಲಿನ ಬಾಲಕಿಯರ ಪ್ರೌಢ ಶಾಲೆಯ ವಿದ್ಯಾರ್ಥಿನೀ ಸಂಘದ ಆಶ್ರಯದಲ್ಲಿ ಸಾಹಸ ಕೂಟದ (ಅಡ್ವೆಂಚರ್ ಕ್ಲಬ್) ಉದ್ಘಾಟನೆಯನ್ನು ಸಮೀಪದ ಉಳುವೆ ಪಕ್ಷಿಧಾಮದ ಪ್ರಕೃತಿಯ ಮಡಿಲಲ್ಲಿ ಅಲ್ಲಿನ ಪರಿಸರ ಪ್ರೇಮಿ ಕೃಷ್ಣಮೂರ್ತಿ ನೆರವೇರಿಸಿದರು. ಮಕ್ಕಳು ಸಾಹಸ ಪ್ರವೃತ್ತಿಯನ್ನೂ ಪರಿಸರ ಪ್ರೇಮವನ್ನೂ ಬೆಳೆಸಿಕೊಳ್ಳಲು ಅವರು ಕರೆಯಿತ್ತರು. ಅರಣ್ಯಾಧಿಕಾರಿ ಬಿ. ಮುನಿಸ್ವಾಮಿ ಮತ್ತು ಶಾಲಾ ಮುಖ್ಯೋಪಾಧ್ಯಾಯ ಕೆ. ಎಸ್. ಬಾಲಕೃಷ್ಣ ಮುಖ್ಯ ಅತಿಥಿಗಳಾಗಿದ್ದರು.

ಕೂಟದ ಸದಸ್ಯರು ಸಂದರ್ಭೋಚಿತವಾಗಿ 'ಪರಿಸರ ಜಾಗೃತಿ', 'ಹವ್ಯಾಸ', 'ವಿಶ್ವ ಮಾನವ' ಮತ್ತು 'ಸಾಹಸ ಪ್ರವೃತ್ತಿ' ಕುರಿತು ಸಂಗ್ರಹಿಸಿದ್ದ ನುಡಿಮುತ್ತುಗಳನ್ನು ಓದಿದರು. ಪಕ್ಷಿಧಾಮದ ಬಳಿಯ ಗುಡ್ಡವನ್ನೇರಿ ಸುತ್ತಲ ನಿಸರ್ಗದ ರಮ್ಯತೆ ಸವಿಯುತ್ತ ಪಕ್ಷಿಗಳ ಕಲರವದೊಡನೆ ತಮ್ಮದನ್ನೂ ಬೆರೆಸಿ ಆನಂದಿಸಿದರು.

### ಎನ್. ಎಸ್. ಎಸ್. ಶಿಬಿರ

ಹರಿಹರಪುರದ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರ ಬಂಡಿಗಡಿಯಲ್ಲಿ ಈಚೆಗೆ ನಡೆಯಿತು. 40 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು ಗ್ರಾಮಸ್ಥರು ಶಿಬಿರದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. (ವರದಿ : ಬೇರುಕೊಡಿಗೆ ಗಣೇಶ್)

### ಶ್ರಮದಾನ

ನ.ರಾ. ಪುರದ ಪದವಿ ಪೂರ್ವ ಕಾಲೇಜಿನ ರಾ ಸೇ. ಯೋಜನೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಗಾಂಧಿ ಜಯಂತಿಯಂದು ಶ್ರಮದಾನ ಮಾಡಿ, ಕ್ರೀಡಾಂಗಣವನ್ನು ವ್ಯವಸ್ಥಿತಗೊಳಿಸಿದರು. ಗಾಂಧಿ ಜಯಂತಿ ಅಂಗವಾಗಿ ವಿವಿಧ ಧರ್ಮ ಗ್ರಂಥಗಳ ಪಠಣ, ಸಾಮೂಹಿಕ ಭಜನೆ ಮತ್ತು ವಿವಿಧ ಸ್ಪರ್ಧೆಗಳೂ ನಡೆದವು.

ಈ ಕಾಲೇಜಿನ ಆಶ್ರಯದಲ್ಲಿ ನವೆಂಬರ್ 11, 12 ಮತ್ತು 13ರಂದು ಜಿಲ್ಲಾ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟ ನಡೆಯಲಿದೆ (ವರದಿ: ನವಿಲೂರು ಪ್ರಕಾಶ್)

### ಅಂಗನವಾಡಿ ಉದ್ಘಾಟನೆ

ಶೃಂಗೇರಿ : ವೈಕುಂಠಪುರದ ಹಿ. ಪ್ರಾ. ಶಾಲೆಯಲ್ಲಿ ಅಂಗನವಾಡಿಯ ಉದ್ಘಾಟನೆಯನ್ನು ಗಾಂಧಿ ಜಯಂತಿಯಂದು ಮಂಡಲ ಸದಸ್ಯ ರಘುಪತಿರಾವ್ ನೆರವೇರಿಸಿದರು. ಗೆಳೆಯರ ಬಳಗದ ನಿರ್ದೇಶಕ ಛಾಯಾಪತಿರಾವ್ ಅಧ್ಯಕ್ಷತೆ ವಹಿಸಿದ್ದರು. ಮು॥ ಸೂರ್ಯನಾರಾಯಣ ಭಟ್ ಸ್ವಾಗತಿಸಿ ಲಲಿತಾ ಭಾಸ್ಕರ್ ವಂದಿಸಿದರು. ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. (ವರದಿ: 'ಶೃಂಗ')

### ಕ್ರೀಡಾಕೂಟ

ಶೃಂಗೇರಿ: ಕಿಗ್ಗ ವಲಯ ಮಟ್ಟದ ಹಿ. ಪ್ರಾ. ಶಾಲೆಗಳ ಕ್ರೀಡಾಕೂಟ ಗಂಡಗಟ್ಟ ಹಿ.ಪ್ರಾ. ಶಾಲೆಯಲ್ಲಿ ನಡೆಯಿತು ಕೆ.ಎಂ. ಮಂಜುನಾಥ್ ಅಧ್ಯಕ್ಷತೆಯಲ್ಲಿ ಜ. ಮಂಜುನಾಥ್ ಧ್ವಜಾರೋಹಣ ಮಾಡಿ, ನಾರಾಯಣ ನಂಬಿಯಾರ್ ಉದ್ಘಾಟಿಸಿದರು. ಮಂಡಲ ಪ್ರಧಾನ ಚಂದ್ರಹಾಸ ಗೌಡರ ಅಧ್ಯಕ್ಷತೆಯಲ್ಲಿ ಅರಣ್ಯಾಧಿಕಾರಿ ಮುನಿಸ್ವಾಮಿ ಸಮಾರೋಪ ಭಾಷಣ ಮಾಡಿದರು. ಸ॥ ಶಿ॥ ಅ॥ ಕೆ. ಎಸ್. ಚನ್ನಪ್ಪ ಬಹುಮಾನ ವಿತರಿಸಿದರು.

### ಪೇಟೆ ಧಾರಣೆ

**ಅಡಿಕೆ**

ಶಿವಮೊಗ್ಗ : 7-10-1989
ಸರಕು : 3000-3680
ಬೆಟ್ಟೆ : 2419-2920
ಗೊರಬಲು : 1380-1599

ಸಾಗರ : 7.10.1989
ಇಡಿ : 2309-2359
ಚಾಲಿ : 2555-2816
ಆಪಿ : 3489-3659
ಸಿಪ್ಪೆ ಗೋಟು : 1139-1229

**ಏಲಕ್ಕಿ**

ಕೊಪ್ಪ 7-10-89
ರಾಶಿ ರೂ 190-250

## ಕುವೆಂಪು ಗೌರವಾರ್ಥ ಕಾರ್ಯಕ್ರಮಗಳು

(3ನೇ ಪುಟದಿಂದ)

ಆದರ ಉಸ್ತುವಾರಿಯನ್ನು ಯೋಗ್ಯವಾಗಿ ನಿರ್ವಹಿಸಬೇಕು ಮತ್ತು ಅಲ್ಲಿನ ಸುತ್ತಮುತ್ತಲ ಕಾಡು, ಬೆಟ್ಟ ಮುಂತಾದ ನೈಸರ್ಗಿಕ ಪರಿಸರವನ್ನು ಹಾಗೇ ಉಳಿಸಿಕೊಳ್ಳಬೇಕು.

4. ಈಗಾಗಲೇ ಗಡೀಕಲ್‌ನಲ್ಲಿ, ಶಿವಮೊಗ್ಗ ಜಿಲ್ಲಾ ಪರಿಷತ್‌ನವರು ಸಭಾಭವನದಂತಹ ಕಟ್ಟಡ ಮಾಡುತ್ತಿದ್ದು, ಅದಕ್ಕೆ ಪೂರಕವಾಗಿ ಚಿಕ್ಕಮಗಳೂರು ಜಿಲ್ಲಾ ಪರಿಷತ್‌ನವರೂ ಕಾಮಗಾರಿಗಳನ್ನು ನಡೆಸಬೇಕು. ಇದಕ್ಕಾಗಿ ಪರಸ್ಪರ ಸಮಾಲೋಚಿಸಿ, ಸಾರ್ವಜನಿಕರಿಗೆ ಹೆಚ್ಚು ಉಪಯುಕ್ತವಾಗುವಂತೆ ಕಾಮಗಾರಿಗಳನ್ನು ನಡೆಸಬೇಕು. ಹಾಗಿಲ್ಲದಿದ್ದಲ್ಲಿ, ಕಾಮಗಾರಿಗಳ ಪುನರಾವರ್ತನೆಯಾಗಿ ಸಾರ್ವಜನಿಕ ಹಣ ಅಪವ್ಯಯವಾಗುವ ಸಂಭವವಿರುತ್ತದೆ.

5. ಈ ಎಲ್ಲಾ ಕಾಮಗಾರಿಗಳೂ ಸ್ಥಳೀಯರ ಮತ್ತು ಸಾಹಿತ್ಯಾಸಕ್ತರ ಸೂಕ್ತ ಚರ್ಚೆ, ಸಲಹೆಗಳ ಮೇರೆಗೆ ನಡೆಯಬೇಕು. ಮತ್ತು ಕಾಮಗಾರಿಗಳ ಮುಕ್ತಾಯದ ನಂತರದ ಉಸ್ತುವಾರಿಯನ್ನು ಸ್ಥಳೀಯ ಸಮಿತಿಗಳಿಗೆ ವಹಿಸಿಕೊಡಬೇಕು.

ಬಿಂ.ಮಂ.ಪಂ.ನಂ. 267/88-89. ಬಿಂತ್ರವಳ್ಳಿ ಮಂಡಲ ಪಂಚಾಯ್ತಿ
ಕಾರ್ಯಾಲಯ, ಬಾಳಗಡಿ, ದಿನಾಂಕ : 1-10-89

## ಪ್ರಕಟಣೆ

1983ರ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯಿತಿ ಸಮಿತಿ, ಮಂಡಲ ಪಂಚಾಯ್ತಿ ಮತ್ತು ನ್ಯಾಯ ಪಂಚಾಯಿತಿ ನಿಯಮ 116 (1) ಮತ್ತು (2) ರ ಅನ್ವಯ ಹಾಗೂ 1986ರ ಕರ್ನಾಟಕ ಮಂಡಲ ಪಂಚಾಯಿತಿ ತೆರಿಗೆ ಮತ್ತು ಫೀ ನಿಯಮ 5 (ಎ) ಮತ್ತು (ಬಿ) ಯಲ್ಲಿ ಸೂಚಿಸಿರುವಂತೆ ಚಿಕ್ಕಮಗಳೂರು ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗಳ ಆದೇಶ ಸಂಖ್ಯೆ ಜಿ. ಪ. ಆ (1) 199/87-88 ದಿನಾಂಕ : 11-12-1987 ರಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರದ ಅನ್ವಯ ಈ ಮಂಡಲ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿರುವ ಕಟ್ಟಡಗಳ ಮತ್ತು ಭೂ ಕಂದಾಯದಿಂದ ಹೊರತುಪಡಿಸಲ್ಪಟ್ಟ ನಿವೇಶನಗಳ ಹಾಗೂ ಗಾಡಿ ಮತ್ತು ಸೈಕಲ್ ಮೇಲಿನ ತೆರಿಗೆಯನ್ನು ದಿ : 1-4-89 ರಿಂದ ಪೂರ್ವಾನ್ವಯವಾಗಿ (ಚಾಲ್ತಿ ಸಾಲಿಗೆ) ಜಾರಿಗೆ ಬರುವಂತೆ ಪರಿಷ್ಕರಿಸಿ ನಿಯಮ 7ರ ಅನ್ವಯ ತೆರಿಗೆ ಪರಿಷ್ಕರಣ ಪಟ್ಟಿಯನ್ನು ತಯಾರಿಸಿ ಪರಿಷ್ಕರಣ ಪಟ್ಟಿಯನ್ನು 1986ರ ಮಂಡಲ ಪಂಚಾಯಿತಿ ತೆರಿಗೆ ಮತ್ತು ಫೀ ನಿಯಮ 8 ರ ಅನ್ವಯ ಗ್ರಾಮಸ್ಥರ ಹಾಗೂ ತೆರಿಗೆದಾರರ ತಿಳುವಳಿಕೆಗಾಗಿ ಈ ದಿನದಿಂದ 30 ದಿನಗಳ ಕಾಲಾವಧಿಯವರೆಗೆ ಪ್ರಚುರಪಡಿಸಲಾಗಿದೆ.

1986 ರ ಮಂಡಲ ಪಂಚಾಯಿತಿ ತೆರಿಗೆ ಮತ್ತು ಫೀ ನಿಯಮ 8ರ ಅನ್ವಯ ಮಾಲೀಕತ್ವದ ಬಗ್ಗೆಯಾಗಲೀ ಅಥವಾ ತೆರಿಗೆ ಪರಿಷ್ಕರಣೆಯ ಬಗ್ಗೆಯಾಗಲೀ ಆಕ್ಷೇಪಣೆಗಳಿದ್ದಲ್ಲಿ ದಿ : 30-10-89ರವರೆಗೆ ಮಂಡಲ ಪಂಚಾಯಿತಿ ಕಛೇರಿಯ ಕಾಲಾವಧಿಯಲ್ಲಿ ಆಕ್ಷೇಪಣ ಅರ್ಜಿಯನ್ನು ಸ್ವೀಕರಿಸಲಾಗುವುದು. ಕಾಲಾತೀತವಾಗಿ ಬರುವ ಆಕ್ಷೇಪಣೆ ಅರ್ಜಿಯನ್ನು ಮಾನ್ಯ ಮಾಡಲಾಗುವುದಿಲ್ಲ. ಆಕ್ಷೇಪಣೆ ಅರ್ಜಿಯ ಬಗ್ಗೆ ನಿರ್ಣಯವು ಮಂಡಲ ಪಂಚಾಯಿತಿ ತೀರ್ಮಾನಕ್ಕೆ ಒಳಪಟ್ಟಿರುತ್ತೆಂಬುದಾಗಿ ಗ್ರಾಮಸ್ಥರಿಗೆ ಮತ್ತು ತೆರಿಗೆದಾರರಿಗೆ ಈ ಮೂಲಕ ಪ್ರಚುರಪಡಿಸಿದೆ. ತೆರಿಗೆ ಪರಿಷ್ಕರಣ ಪಟ್ಟಿಯನ್ನು ಕಛೇರಿ ಕಾಲಾವಧಿಯಲ್ಲಿ ಗಮನಿಸಲು ಅವಕಾಶವಿರುತ್ತದೆ.

(ಸಹಿ) ಕಾರ್ಯದರ್ಶಿ,
ಬಿಂತ್ರವಳ್ಳಿ ಮಂಡಲ ಪಂಚಾಯಿತಿ



ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.